

# ಅದೃಷ್ಟದ ಬೆಕ್ಕು

**ಕೆ**ಲವು ನಂಬಿಕೆಗಳು ಬಲು ವಿಚಿತ್ರವಾಗಿರುತ್ತವೆ. ನಮ್ಮಲ್ಲಿ ಬೆಕ್ಕು ಅಡ್ಡ ಬಂದರೆ ಅಪಶಕುನ ಎಂದು ಕೆಲವರು ಭಾವಿಸಿದರೆ ಜಪಾನ್ ದೇಶದ ಜನರಿಗೆ ಬೆಕ್ಕು ಅದೃಷ್ಟದ ಸಂಕೇತ. ಅದಕ್ಕಾಗಿಯೇ ಇಲ್ಲಿನ ಹಲವಾರು ಅಂಗಡಿ, ಹೋಟೆಲ್ ಮುಂತಾದ ವ್ಯಾಪಾರ ಸ್ಥಳಗಳ ಮುಂದೆ ಮುಂಗಾಲನ್ನು ಎತ್ತಿರುವ ಬೆಕ್ಕಿನ ಬೊಂಬೆಯನ್ನು ಬಾಗಿಲ ಬಳಿ ಇರಿಸಿರುತ್ತಾರೆ. ಜಪಾನ್ ಭಾಷೆಯಲ್ಲಿ ಇದನ್ನು 'ಮನೆಕಿ ನೆಕೊ' ಎನ್ನುತ್ತಾರೆ. ಕೈಯಿಂದ ಸನ್ನೆ ಮಾಡುವ ಬೆಕ್ಕು ಎಂಬುದು ಇದರರ್ಥ. ಇದನ್ನು ಇರಿಸಿಕೊಂಡ ಒಡೆಯನಿಗೆ ಅದೃಷ್ಟ ಪ್ರಾಪ್ತಿಯಾಗುತ್ತದೆಯೆಂಬುದು ಅಲ್ಲಿನವರ ನಂಬಿಕೆ. ಎತ್ತಿರುವ ಕಾಲು ಗಿರಾಕಿಗಳನ್ನು ಕರೆ ತರುತ್ತದೆಯೆಂದೂ ಹಾಗೆಯೇ ಮತ್ತೊಂದು ಕಾಲು ಅದೃಷ್ಟ ಹಾಗೂ ಸಂಪತ್ತನ್ನು ತರುವುದೆಂದೂ ಹೇಳಲಾಗುತ್ತದೆ. ಈಗ 'ಮನೆಕಿ ನೆಕೊ' ಕೂಡ ಲಾಫಿಂಗ್ ಬುದ್ಧ (ನಗುವ ಬುದ್ಧ) ದಂತೆ ಏಷ್ಯಾದ ಇತರೆಡೆಯಲ್ಲಿಯೂ ಜನಪ್ರಿಯಗೊಳ್ಳುತ್ತಿದೆ. ಅಂತಹ ಬೆಕ್ಕುಗಳ ನಿಜವಾದ ನೆಲೆ ಯಾವುದೆಂದರೆ ಟೋಕಿಯೋದ ಬಳಿಯಿರುವ ಗೊಟೊಕೊಜಿ ದೇವಸ್ಥಾನ.

ಅದೃಷ್ಟದ ಬೆಕ್ಕಿನ ಬಗ್ಗೆ ಈಡೊ ಕಾಲದಲ್ಲಿ ನಡೆದಿದೆ ಎನ್ನಲಾದ ದಂತಕಥೆಯೊಂದು ಹೀಗಿದೆ. ಹಿಕೊನೆ (ಈಗಿನ ಷಿಗಾ ಪ್ರಿಫೆಕ್ಚರ್)ಎಂಬಲ್ಲಿಯ ಶ್ರೀಮಂತನೊಬ್ಬ ಗುಡುಗು ಸಿಡಿಲಿನಿಂದ ರಕ್ಷಣೆ ಪಡೆಯಲೆಂದು ಗೊಟೊಕೊಜಿ ದೇವಸ್ಥಾನದ ಬಳಿಯಲ್ಲಿನ ಮರವೊಂದರ ಕೆಳಗೆ ನಿಂತಿದ್ದನಂತೆ. ಆ ಗುಡಿಯ ಅರ್ಚಕನ ಬೆಕ್ಕೊಂದು ತನ್ನ ಮುಂಗಾಲನ್ನು ಎತ್ತಿ ಸನ್ನೆ ಮಾಡಿ ಕರೆದಾಗ ಅದನ್ನು ಹಿಂಬಾಲಿಸಿದನಂತೆ. ಆತ ಮುಂದೆ ನಡೆದು ಹೋಗುತ್ತಿದ್ದಂತೆಯೇ ಆ ಮರಕ್ಕೆ ಬಲವಾದ ಸಿಡಿಲು ಬಡಿಯಿತಂತೆ. ತನ್ನ ಪ್ರಾಣವನ್ನುಳಿಸಿದ ಆ ಬೆಕ್ಕಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿಯೇ ಭವ್ಯ ದೇಗುಲವನ್ನು ನಿರ್ಮಿಸಲು ಆತ ಬಹಳಷ್ಟು ಹಣವನ್ನು ದಾನವಾಗಿ ನೀಡಿದನಂತೆ. ಆ ಬೆಕ್ಕು ಸತ್ತಾಗ, ಅದಕ್ಕೆ ಗೌರವ ಸಲ್ಲಿಸಲು ಮೊದಲ ಮನೆಕಿ ನೆಕೊ ತಯಾರಿಸಲಾಯಿತಂತೆ. ಕಾಲ ಕ್ರಮೇಣ ಜನರು ತಮ್ಮ ಇಷ್ಟಾರ್ಥಗಳು ನೆರವೇರಿದಾಗ ಬೊಂಬೆ ಬೆಕ್ಕುಗಳನ್ನು ದೇವಸ್ಥಾನಕ್ಕೆ ಅರ್ಪಿಸಲು ಪ್ರಾರಂಭಿಸಿದರಂತೆ. ಅದರಂತೆ ಇಲ್ಲಿ ಸಾಕಷ್ಟು ಸಂಖ್ಯೆಯ ಮನೆಕಿ ನೆಕೊಗಳನ್ನು ನೋಡಬಹುದು.

**■ ವಿನಯ್‌ಕುಮಾರ್ ಬಿ.ಹೆಚ್.**




